This Question Paper contains 3 Printed Pages.

01K(A)

KANNADA, Paper - I

(First Language)

Parts A and B

Time : 2 hours 45 min.] **[Maximum Marks : 40**

ಸೂಚನೆಗಳು :

1. **Part-A** ಪ್ರಶ್ನೆಗಳಿಗೆ ಪ್ರತ್ಯೇಕ ಉತ್ತರ ಪತ್ರಿಕೆಯಲ್ಲಿ ಉತ್ತರಿಸಿ.
2. **Part-B** ಪ್ರಶ್ನೆಗಳಿಗೆ ನಿಮಗೆ ಕೊಟ್ಟಿರುವ ಪ್ರಶ್ನೆಪತ್ರಿಕೆಯಲ್ಲಿಯೇ ಸೂಚಿತ ಸ್ಥಳಗಳಲ್ಲಿ ಉತ್ತರಿಸಿ ಅದನ್ನು **Part-A** ಉತ್ತರಪತ್ರಿಕೆಗೆ ಲಗತ್ತಿಸಿ. ಮೊದಲ **15** ನಿಮಿಷ ಪ್ರಶ್ನೆಪತ್ರಿಕೆ ಓದುವುದಕ್ಕೆ **2.30** ನಿಮಿಷಗಳು ಉತ್ತರಗಳನ್ನು ಬರೆಯುವುದಕ್ಕೆ ಒದಗಿಸಲಾಗಿದೆ.

Part-A

Time : 2 hours ***Marks : 30***

I. ಅವಗಾಹನೆ - ಪ್ರತಿಸ್ಪಂದನೆ (**12** ಅಂಕಗಳು)

1. ಇವುಗಳಲ್ಲಿ **ಒಂದಕ್ಕೆ** ಪ್ರತಿಪದಾರ್ಥ ಬರೆಯಿರಿ : **1 × 4 = 4**

ಅ) ಲಲನೆ ಪಡೆದೀಯೈದು ಮಂತ್ರಂ
ಗಳಲಿ ಮೊದಲಿಗ ನೀನು ನಿನ್ನಯ
ಬಳಿ ಯುಧಿಷ್ಠಿರದೇವ ಮೂರನೆಯಾತ ಕಲಿಭೀಮ
ಫಲುಗುಣನು ನಾಲ್ಕನೆಯಲೈದನೆ
ಯಲಿ ನಕುಲ ಸಹದೇವರಾದರು
ಬಳಿಕ ಮಾದ್ರಿಯಲೊಂದು ಮಂತ್ರದೊಳಿಬ್ಬರುದಿಸಿದರು

(ಅಥವಾ)

ಆ) ಕಾದದಿರೆನಜ್ಜ ಪಾಂಡವ
ರಾದರ್ ಮೇಣಿಂದಿನೊಂದೆ ಸಮರದೊಳಾಂ ಮೇ ॥
ಣಾದೆನದಱೆಂದೆ ಪಾಂಡವ
ರ್ಗಾದುದು ಮೇಣಾಯ್ತು ಕೌರವಂಗವನಿತಳಂ ॥

2. ಇವುಗಳಲ್ಲಿ **ಒಂದನ್ನು** ಪಾದಭಂಗವಿಲ್ಲದಂತೆ ಪೂರ್ಣಗೊಳಿಸಿ ಭಾವಾರ್ಥ ಬರೆಯಿರಿ : $1 \times 4 = 4$

ಅ) ಸಿಕ್ಕದ್ದು ..... ಜನಕಾ.

ಆ) ಅಂತೆಂಬನಾರ್ಗೆ ..... ನುಡಿದಂ.

3. ಈ ಗದ್ಯಭಾಗವನ್ನು ಓದಿಕೊಂಡು ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : $4 \times 1 = 4$

ಒಬ್ಬ ಬ್ರಹ್ಮರ್ಷಿ ಋಷ್ಯಮೂಕ ಪರ್ವತದ ಬಳಿ ತಪಸ್ಸು ಮಾಡಿಕೊಂಡದ್ದ. ವಾಲಿಯು ದುಂದುಭಿಯೆಂಬ ರಕ್ಕಸನನ್ನು ಕೊಂದು ಮದೋನ್ಮತ್ತನಾಗಿ ಕಳೇಬರವನ್ನು ಆಶ್ರಮಕ್ಕೆ ಎಸೆದಾಗ ಋಷ್ಯಾಶ್ರಮವು ಕಲುಷಿತಗೊಂಡಿತು. ಇದರಿಂದ ಕುಪಿತನಾದ ಮತಂಗ ಮುನಿ ವಾಲಿಯು ಈ ಆಶ್ರಮವನ್ನು ಪ್ರವೇಶ ಮಾಡಿದರೆ ಸಾವು ಸಂಭವಿಸಿಲಿ ಎಂದು ಶಪಿಸಿದ. ವಾಲಿಯಿಂದ ಭಯಗ್ರಸ್ಥನಾದ ಸುಗ್ರೀವ ಇಲ್ಲಿ ನೆಲೆಸಿದ್ದನು. ಶಬರಿಯು ಮತಂಗರ ಆಶ್ರಮದಲ್ಲಿದ್ದಳು.

ಪ್ರಶ್ನೆಗಳು :

ಅ) ಋಷ್ಯಾಶ್ರಮವು ಕಲುಷಿತಗೊಳ್ಳಲು ಕಾರಣವೇನು ?

ಆ) ಮತಂಗರ ಆಶ್ರಮದಲ್ಲಿದ ತಪಸ್ವಿನಿ ಯಾರು ?

ಇ) ಮತಂಗರು ವಾಲಿಗೆ ಏನೆಂದು ಶಪಿಸಿದರು ?

ಈ) ವಾಲಿಯಿಂದ ಭಯಗ್ರಸ್ಥರಾದವರು ಯಾರು ?

II. ವ್ಯಕ್ತೀಕರಣ – ಸೃಜನಾತ್ಮಕತೆ (18 ಅಂಕಗಳು)

ಅ) ಈ ಕೆಳಗಿನ ಪ್ರಶ್ನೆಗಳಿಗೆ 4-5 ವಾಕ್ಯಗಳಲ್ಲಿ ಉತ್ತರಿಸಿ : $4 \times 2 = 8$

4. ದುಷ್ಟಬುದ್ಧಿಯು ತನ್ನ ತಂದೆಗೆ ಏಕಾಂತದಲ್ಲಿ ಏನೆಂದು ಹೇಳಿದನು ?

5. ಅಶೋಕ ಪೈ ಹೇಳಿದ ಸಂಶೋಧನಾ ಸತ್ಯವೇನು ?

6. ಕುದುರೆಯನ್ನು ಕಟ್ಟುವ ವಿಚಾರದಲ್ಲಿ ಮುನಿಸುತರಿಗೂ ಲವನಿಗೂ ನಡೆದ ಸಂವಾದವನ್ನು ಬರೆಯಿರಿ.

7. ಹೊಸಗಾಲದ ಹಸುಮಕ್ಕಳನ್ನು ಹಕ್ಕಿ ಹೇಗೆ ಹರಸಿದೆ ?

ಆ) ಈ ಕೆಳಗಿನ ಪ್ರಶ್ನೆಗಳಿಗೆ 10-12 ವಾಕ್ಯಗಳಲ್ಲಿ ಉತ್ತರಿಸಿ : $2 \times 5 = 10$

8. ರಾಹಿಲನು ಮುದುಕಿಯ ಕುಟುಂಬಕ್ಕೂ ಮುದುಕಿಯು ರಾಹಿಲನಿಗೆ ಮಾಡಿದ ಸಹಾಯವನ್ನು ಸಂಕ್ಷಿಪ್ತವಾಗಿ ವಿವರಿಸಿ.

ಅಥವಾ

ಮೂರ್ತಿರಾಯರ ದೃಷ್ಟಿಯಲ್ಲಿ ಹುಲಿಯು ಬೇಟೆಯಾಡುವ ಬಗೆಯನ್ನು ವಿವರಿಸಿ.

9. ನಾವು ಯಾವ ಸಂಕಲ್ಪ ಕೈಗೊಳ್ಳಬೇಕೆಂಬುದು ಕವಿ ಶಿವರುದ್ರಪ್ಪನವರ ಆಶಯ ?

ಅಥವಾ

ಹಸುರು ಸಕಲೇಂದ್ರಿಯಗಳನ್ನು ವ್ಯಾಪಿಸಿದೆ ಎಂಬುದನ್ನು ಕವಿಯು ಹೇಗೆ ವರ್ಣಿಸಿದ್ದಾರೆ ?

This Question Paper contains 4 Printed Pages.

01K(B)

KANNADA, Paper - I

(First Language)

Parts A and B

Time : 2 hrs. 45 min.] **[Maximum Marks : 40**

ಸೂಚನೆ : ಈ ವಿಭಾಗದ ಪ್ರಶ್ನೆಗಳಿಗೆ ಈ ಪ್ರಶ್ನಪತ್ರಿಕೆಯಲ್ಲಿಯೇ ಸೂಚಿತ ಸ್ಥಳಗಳಲ್ಲಿ ಉತ್ತರಿಸಿ ಇದನ್ನು **Part-A** ಉತ್ತರಪತ್ರಿಕೆಗೆ ಲಗತ್ತಿಸಿ.

Part-B

Time : 30 minutes ***Marks : 10***

ಭಾಷಾಂಶಗಳು (10 ಅಂಕಗಳು)

III. ಪ್ರತಿಯೊಂದು ಪ್ರಶ್ನೆಗೆ ಕೊಟ್ಟಿರುವ ನಾಲ್ಕು ನಾಲ್ಕು ಉತ್ತರಗಳ ಪೈಕಿ ಸರಿಯಾದುದನ್ನು ಸೂಚಿಸುವ ಕ್ರಮಾಕ್ಷರವನ್ನು ಆಯಾ ಪ್ರಶ್ನೆಯ ಮುಂದಿನ ಆವರಣದಲ್ಲಿ ಬರೆಯಿರಿ : **$20 \times \frac{1}{2} = 10$**

10. ಮೃತ್ಪಾತ್ರ ಎಂಬುದರ ಅರ್ಥ : [ ]

(A) ಚಿನ್ನದ ಪಾತ್ರೆ (B) ಬೆಳ್ಳಿಯ ಪಾತ್ರೆ

(C) ಮಣ್ಣಿನ ಪಾತ್ರೆ (D) ಕಬ್ಬಿಣ ಪಾತ್ರೆ

11. ರೋದನ ಎಂಬುದರ ಅರ್ಥ : [ ]

(A) ಅಳುವಿಕೆ (B) ನಗುವುದು

(C) ಹಾಡುವುದು (D) ಕುಣಿಯುವುದು

12. ಹಯ ಎಂಬುದರ ಸಮಾನಾರ್ಥಕ ಪದ : [ ]

(A) ಹಸು, ಆಕಳು (B) ಕುದುರೆ, ಅಶ್ವ

(C) ಹಾವು, ಉರಗ (D) ಎತ್ತು , ಕೋಣ

13. ತನೂಜ ಇದರ ಸಮಾನಾರ್ಥಕ ಪದ :

(A) ಮಗ, ಕುಮಾರ
(B) ಮನುಜ, ದಿಗ್ಗಜ
(C) ಶೂರ, ತನ್ಮಯ
(D) ಕಣಜ, ಜಲಜ

[ ]

14. ಕಾಡು ಎಂಬುದರ ನಾನಾರ್ಥಗಳು :

(A) ಗೀಡು, ಕಡಿಯುವುದು
(B) ಅರಣ್ಯ, ದಂಡೆ
(C) ಹೊಲ, ತೋಟ
(D) ಅರಣ್ಯ, ಪೀಡಿಸು

[ ]

15. ಕಂದ ಎಂಬುದರ ನಾನಾರ್ಥಗಳು :

(A) ಮಗು, ಭಂದೋರೂಪ
(B) ಕವಿ, ವಿದ್ವಾಂಸ
(C) ಸಂಕೇತ, ಆವರಿಸು
(D) ಮಗು, ಮುದುಕ

[ ]

16. ಭೂಮಿಯ ಮಗಳು ಇದರ ವ್ಯುತ್ಪತ್ತಿ ಅರ್ಥ :

(A) ಕೌಶಲ್ಯ
(B) ಸೀತೆ
(C) ಶಬರಿ
(D) ಕುಂತಿ

[ ]

17. ಅಬ್ಧಿಪ ಇದರ ವ್ಯುತ್ಪತ್ತಿ ಅರ್ಥ :

(A) ಭೂಮಿಯ ಒಡೆಯ
(B) ಅಗ್ನಿಯ ಒಡೆಯ
(C) ಸಮುದ್ರದ ಒಡೆಯ
(D) ಆಕಾಶರಾಜ

[ ]

18. ಕಾರ್ಯ ಎಂಬುದರ ತದ್ಭವರೂಪ :

(A) ವೃತ್ತಿ
(B) ಕಜ್ಜ
(C) ಕಸುಬು
(D) ಕೆಲಸ

[ ]

19. ಬೇಹಾರಿ ಎಂಬುದರ ತತ್ಸಮ : [ ]

(A) ವ್ಯವಹಾರ
(B) ಬಾಯಾರಿ
(C) ವಿರೋದ್ಗಾರಿ
(D) ವ್ಯಾಪಾರಿ

20. ದೇವೇಂದ್ರ ಎನ್ನುವಲ್ಲಿ ಆಗಿರುವ ಸಂಧಿ : [ ]

(A) ಸವರ್ಣದೀರ್ಘ
(B) ಗುಣ
(C) ವೃದ್ಧಿ
(D) ಯಣ್

21. ಮರವನ್ನು ಎಂಬುದರ ಸಂಧಿ ಬಿಡಿಸಿದರೆ : [ ]

(A) ಮರ + ವನ್ನು
(B) ಮರವು + ಅನ್ನು
(C) ಮರ + ಅನ್ನು
(D) ಮರ + ಯನ್ನು

22. ಸಾಕ್ಷಿಮಾಡಿ ಎನ್ನುವಲ್ಲಿ ಆಗಿರುವ ಸಮಾಸ : [ ]

(A) ಕ್ರಿಯಾ ಸಮಾಸ
(B) ದ್ವಿಗು
(C) ಗಮಕ
(D) ಅಂಶಿ

23. ಹೊಸಗನ್ನಡ ಎನ್ನುವುದರ ವಿಗ್ರಹವಾಕ್ಯ : [ ]

(A) ಹೊಸ + ಗನ್ನಡ
(B) ಹೊಸದು + ಕನ್ನಡ
(C) ಹೊಸ + ಅನ್ನಡ
(D) ಹೊಸತು + ಗನ್ನಡ

24. ಖ್ಯಾತ ಕರ್ನಾಟಕ ವೃತ್ತಗಳ ಸಂಖ್ಯೆ : [ ]

(A) ನಾಲ್ಕು
(B) ಐದು
(C) ಆರು
(D) ಎಂಟು

25. ಮಾತ್ರಾಗಣ ಛಂದಸ್ಸಿನಲ್ಲಿ ಬಹುಪಾದಗಳುಳ್ಳ ಪದ್ಯ : [ ]

(A) ಕಂದ (B) ಷಟ್ಪದಿ

(C) ವೃತ್ತ (D) ರಗಳೆ

26. ದೇವರು ಇಲ್ಲಿರುವ ಗಣ : [ ]

(A) ಭಗಣ (B) ಮಗಣ

(C) ಯಗಣ (D) ನಗಣ

27. "ಅತಿ ಸಾಮ್ಯದಿಂದಾಗಿ ಉಪಮೇಯ ಉಪಮಾನಗಳಲ್ಲಿ ಅಭೇದವನ್ನು ಹೇಳಿ ವರ್ಣಿಸಿದಾಗ "
– ಈ ಅಲಂಕಾರ : [ ]

(A) ಉಪಮಾಲಂಕಾರ (B) ರೂಪಕಾಲಂಕಾರ

(C) ಉತ್ಪ್ರೇಕ್ಷಾಲಂಕಾರ (D) ಯಮಕ

28. "ಮಾತು ಬಲ್ಲವನಿಗೆ ಜಗಳವಿಲ್ಲ ; ಊಟಬಲ್ಲವನಿಗೆ ರೋಗವಿಲ್ಲ" – ಅಲಂಕಾರ ಗುರುತಿಸಿ : [ ]

(A) ಉಪಮಾ (B) ರೂಪಕ

(C) ದೃಷ್ಟಾಂತ (D) ಶ್ಲೇಷ

29. ಉಪಮಾಲಂಕಾರಕ್ಕೆ ಉದಾಹರಣೆ : [ ]

(A) ಅಳ್ಳಿರಿಯುತಿಪ್ಪ ಎಮ್ಮ ಒಡಲ ಬೇಗೆಯ ಬೆಂಕಿಯುರಿ ನಿನ್ನನಿರಿಯದೆ ಪೇಳು ವಿಶ್ವಾಮಿತ್ರ

(B) 'ನೀಚರಿಗೆ ಮಾಡಿದ ಉಪಕಾರ ಹಾವಿಗೆ ಹಾಲೆರದಂತೆ '

(C) ಆತನು ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದು ಉತ್ತೀರ್ಣನಾದನು. ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ ?

(D) ಅಚ್ಚೋದ ಸರೋವರವು ತ್ರೈಲೋಕ್ಯಲಕ್ಷ್ಮಿಯು ತನ್ನ ಸೌಂದರ್ಯವನ್ನು ನೋಡಲು ಮಾಡಿಟ್ಟ ರನ್ನಗನ್ನಡಿಯೋ ಎಂಬಂತೆ ಶೋಭಿಸಿತು.